# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437

ಕ್ರ.ಸಂ: ಅಇಂ(ವಿ)/ಉಲೆನಿ/ಹಿಸ-1/2021-22/ 448-209 ದಿನಾಂಕ: 29 JUL 2021

## ಪ್ರಕಟಣೆ [Notification]

**"ಮೈಕ್ರೋ ಫೀಡರ್ ಫ್ರಾಂಚೈಸಿ" ರವರನ್ನು ನೇಮಕ ಮಾಡಿಕೊಳ್ಳುವುದು.**

***************

ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ., ಹುಬ್ಬಳ್ಳಿ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಮೈಕ್ರೋ ಫೀಡರ್ ಪ್ರಾಂಚೈಜಿಯನ್ನು ಹುವಿಸಕಂನಿಯ ವಿದ್ಯುತ್ ಕಂದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನ (Incentive) ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದಕ್ಕಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಮೈಕ್ರೋ ಫೀಡರ್ ಪ್ರಾಂಚೈಸಿಯು ಪ್ರತಿ ತಿಂಗಳಿಗೆ ಗೊತ್ತುಪಡಿಸಿದ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ., ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ರೂ.12,000/-(ಹನ್ನೆರಡು ಸಾವಿರ ರೂಗಳು ಮಾತ್ರ)ವನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ" ವಾಗಿ ನೀಡಲಾಗುವುದು. ಎಂಎಫ್.ಎಫ್.ಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

➤ **ಮೈಕ್ರೋ-ಫೀಡರ್ ಪ್ರಾಂಚೈಸಿ ಸ್ಥಾನಗಳು ಖಾಲಿ ಇರುವ ಗ್ರಾಮ ಪಂಚಾಯತಿಗಳ ವಿವರ:**

| ಕ್ರ. ಸಂ | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ಗ್ರಾಮ ಪಂಚಾಯತಿ ಹೆಸರು | ಎಂ.ಎಫ್.ಎಫ್. ಸಂಖ್ಯೆ |
|---|---|---|---|---|
| 1 | ಗ್ರಾಮೀಣ ವಿಭಾಗ, ಹುಬ್ಬಳ್ಳಿ | ಗ್ರಾಮೀಣ ಉಪವಿಭಾಗ, ಹುಬ್ಬಳ್ಳಿ | ಬೆಳಗಲಿ | 1 |
| 2 | | | ಹಳ್ಳಿಯಾಳ | 1 |
| 3 | | | ಅಂಚಟಗೇರಿ | 1 |
| 4 | | | ರಾಯನಾಳ | 1 |
| 5 | | ಉಪವಿಭಾಗ, ಕುಂದಗೋಳ | ಯರಗುಪ್ಪಿ | 1 |
| 6 | | | ಬೆಟದೂರ | 1 |
| 7 | | ನವಲಗುಂದ ಉಪ ವಿಭಾಗ | ಮೊರಬ-1 | 1 |
| 8 | ಕಾ ಮತ್ತು ಪಾ ಗ್ರಾಮೀಣ ವಿಭಾಗ, ಧಾರವಾಡ | ಗ್ರಾಮೀಣ ಉಪವಿಭಾಗ, ಧಾರವಾಡ | ನಿಗದಿ | 1 |
| 9 | | | ಹಳ್ಳಿಗೇರಿ | 1 |
| 10 | | | ಕೋಟೂರ | 1 |
| 11 | | | ಹೊನ್ನಾಪೂರ | 1 |
| 12 | | ಕಲಘಟಗಿ ಉಪ ವಿಭಾಗ | ದುಮ್ಮವಾಡ | 1 |
| 13 | | | ಮುಕ್ಕಲ್ | 1 |

....2

| ಕ್ರ. ಸಂ | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ಗ್ರಾಮ ಪಂಚಾಯತಿ ಹೆಸರು | ಎಂ.ಎಫ್.ಎಫ್. ಸಂಖ್ಯೆ |
|---|---|---|---|---|
| 14 | ಕಾ ಮತ್ತು ಪಾ ವಿಭಾಗ, ಗದಗ | ಗ್ರಾಮೀಣ ಉಪ ವಿಭಾಗ ಗದಗ | ಬೆಳದಡಿ | 1 |
| 15 | | ಮುಂಡರಗಿ ಉಪ ವಿಭಾಗ | ಹಮ್ಮಗಿ | 1 |
| 16 | | | ಮೇವುಂಡಿ | 1 |
| 17 | | ಲಕ್ಷ್ಮೇಶ್ವರ ಉಪ ವಿಭಾಗ | ಬಾಲೆಹೊಸೂರ | 1 |
| 18 | | | ಶಿಗ್ಲಿ | 1 |
| 19 | | | ರಾಮಗಿರಿ | 1 |
| 20 | | | ಬೆಳ್ಳಟ್ಟಿ-1 | 1 |
| 21 | | | ಕುಗನೂರ | 1 |
| 22 | | | ಮಾಗಡಿ | 1 |
| 23 | ಕಾ ಮತ್ತು ಪಾ ವಿಭಾಗ, ರೋಣ | ರೋಣ ಉಪ ವಿಭಾಗ | ಹೊಳೆಆಲೂರ | 1 |
| 24 | | | ಹಿರೇಹಾಳ | 1 |
| 25 | | ಗಜೇಂದ್ರಗಡ ಉಪ ವಿಭಾಗ | ಗೋಗೇರಿ | 1 |
| 26 | | ನರಗುಂದ ಉಪ ವಿಭಾಗ | ಶಿರೋಳ | 1 |

## ➢ ಅರ್ಹತೆ:

1. ಮೈಕ್ರೋ ಫೀಡರ್ ಫ್ರಾಂಚೈಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ವಾಸ ಸ್ಥಳದ(ರಹವಾಸಿ) ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿರವರಿಂದ ಪಡೆದಿರಬೇಕು.
2. **ಅಭ್ಯರ್ಥಿಯ ಕನಿಷ್ಟ ವಿದ್ಯಾರ್ಹತೆ:**
   **ಪಿ.ಯು.ಸಿ. ದ್ವಿತಿಯ ವರ್ಷ ಪಾಸಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.**
   ಅ) ತತ್ಸಮಾನ ವಿದ್ಯಾರ್ಹತೆ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಣ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು.
   ಆ) ದ್ವಿತಿಯ ಪಿ.ಯು.ಸಿಯಲ್ಲಿ ಗಳಿಸಿದ ಅಂಕಗಳನ್ನು ಮೇರಿಟ್‌ಗೆ ಪರಿಗಣಿಸಲಾಗುವುದು.
   ಇ) ತತ್ಸಮಾನ ವಿದ್ಯಾರ್ಹತೆಗೆ ಗಳಿಸಿದ ಅಂಕಗಳನ್ನು ಪರಿಗಣಿಸುವ ಕುರಿತು ಸಂಬಂಧಪಟ್ಟ ಪ್ರಾಧಿಕಾರದಿಂದ ದೃಢೀಕರಿಸಿದ ಪತ್ರ ಅಥವಾ ಸರಕಾರಿ ಆದೇಶದ ಪ್ರತಿಯನ್ನು ಅರ್ಜಿದಾರರು ಸಲ್ಲಿಸತಕ್ಕದ್ದು. ಅರ್ಜಿದಾರರು ನೋಟರಿಯವರಿಂದ ದೃಢೀಕರಿಸಿದ ಪ್ರತಿಯನ್ನು ಸಲ್ಲಿಸುವುದು.
3. ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ರಿಂದ 40 ವರ್ಷ ವಯಸ್ಸಿನ ವಯೋಮಿತಿಯಲ್ಲಿರಬೇಕು.
4. ಆಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50,000/- ಅಥವಾ ಗರಿಷ್ಠ 5 ದಿನಗಳ ತಿಂಗಳಿನ ಸರಾಸರಿ ಕಂದಾಯ ಬೇಡಿಕೆ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ ಹಣವನ್ನು ಬ್ಯಾಂಕ್ ಗ್ಯಾರಂಟಿ ನೀಡಲು ಶಕ್ತರಾಗಿರಬೇಕು. ಸದರಿ ಬ್ಯಾಂಕ್ ಗ್ಯಾರಂಟಿಯು 12+3=15 ತಿಂಗಳ ಅವಧಿಗೆ ಊರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬುರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ.

......3